# ಎನ್‌ಐಟಿಕೆ: ಬಿ.ಟೆಕ್ ಹಳೆ ವಿದ್ಯಾರ್ಥಿಗಳ ರಜತ ಪುನರ್ಮಿಲನ



**ಸುರತ್ಕಲ್, ಡಿ. 28:** ಇಲ್ಲಿನ ಎನ್‌ಐಟಿಕೆ 1999 ಬಿ.ಟೆಕ್ ಬ್ಯಾಚ್‌ನ ಹಳೆ ವಿದ್ಯಾರ್ಥಿಗಳ ರಜತ ಪುನರ್ಮಿಲನ ಡಿ. 22ರಿಂದ 24ರ ವರೆಗೆ ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ 8 ವಿಭಾಗಗಳ 95ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಎನ್‌ಐಟಿಕೆ ಮತ್ತು ಸುತ್ತಮುತ್ತಲಿನ ನೀರಿನ ಬಿಕ್ಕಟ್ಟನ್ನು ಪರಿಹರಿಸಲು ಎನ್‌ಐಟಿಕೆ ಮಿಷನ್ ವಾಟರ್ ಕೊಡುಗೆ ನೀಡಲು ನಿರ್ಧರಿಸಿತು. ಇದೇ ಸಂದರ್ಭ ನಿವೃತ್ತ ಪ್ರಾಧ್ಯಾಪಕರಾದ ಪ್ರೊ| ಕೆ.ಆರ್. ಕಾಮತ್, ಪ್ರೊ| ಅಪ್ಪುಕುಟ್ಟನ್, ಪ್ರಸ್ತುತ ಅಧ್ಯಾಪಕರಾದ ಪ್ರೊ| ಸುಮನ್ ಡೇವಿಡ್, ಪ್ರೊ| ಎಂ.ಎಸ್.ಭಟ್, ಪ್ರೊ| ಕೆ.ವಿ. ಗಂಗಾಧರನ್ ಅವರನ್ನು ಸಮ್ಮಾನಿಸಲಾಯಿತು.

ಬ್ಯಾಚ್‌ನ ವಾಸುದೇವ್, ರವೀಂದ್ರ ಗುಜ್ರಾಲ್, ಅರವಿಂದ್ ಶ್ರಾಫ್, ರಾಜಶೇಖರ್ ಜಿ., ಯುವರಾಜ್ ಜಿ. ಆಯೋಜಿಸುವಲ್ಲಿ ಸಹಕರಿಸಿದರು.

Udayavani, Date: 29/12/24, p, no - 03